ರೀಲ್ ಮಾಡೆಲ್



‘ಉಡುಪಿಯ ಕಂಡೀರಾ’ ಮಂಜುನಾಥ್ ಕಾಮತ್ ಬದುಕಿನ ಕಥೆ

# ‘ಅಧ್ಯಾಪನ ಬಿಟ್ಟೆ, ಕಂಟೆಂಟ್ ಕ್ರಿಯೇಟರ್ ಆದೆ

■ ನಿರೂಪಣೆ: **ನವೀನ್ ಕುಮಾರ್ ಜಿ.**

ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ಪತ್ರಿಕೋದ್ಯಮ ಉಪನ್ಯಾಸಕನಾಗಿದ್ದಾಗ, ಮುಂದೆ ಸಾಮಾಜಿಕ ಮಾಧ್ಯಮವು ನನ್ನ ಜೀವನೋಪಾಯವೂ ಆಗುತ್ತದೆ ಎಂದು ಕನಸಿನಲ್ಲಿಯೂ ನೆನೆಸಿರಲಿಲ್ಲ. ವಿಡಿಯೊ ಮಾಡುವುದಕ್ಕಿಂತಲೂ ಬರವಣಿಗೆ ನನ್ನ ಇಷ್ಟದ ಹವ್ಯಾಸವಾಗಿತ್ತು. ಫೇಸ್‌ಬುಕ್‌ನಲ್ಲಿ ನನ್ನ ಭಾವಗಳಿಗೆ ಬರಹದ ರೂಪ ನೀಡುತ್ತಿದ್ದೆ. ಕೆಲವೊಮ್ಮೆ ವಿಡಿಯೊಗಳನ್ನೂ ಹಾಕುತ್ತಿದ್ದೆ. ಬರೀ ಫೇಸ್‌ಬುಕ್‌ಗೆ ವಿಡಿಯೊ ಅಪ್‌ಲೋಡ್ ಮಾಡಿ ಪ್ರಯೋಜನವಿಲ್ಲ ಫೇಸ್‌ಬುಕ್ ಪೇಜ್ ಮಾಡು ಎಂದು ಗೆಳೆಯರು ಸಲಹೆ ನೀಡುತ್ತಿದ್ದರು.

ಆಪ್ತರ ಸಲಹೆಯಂತೆ ‘ಉಡುಪಿಯ ಕಂಡೀರಾ’ ಫೇಸ್‌ಬುಕ್ ಪೇಜ್ ಅನ್ನು ಮೂರು ವರ್ಷಗಳ ಹಿಂದೆ ಶುರುಮಾಡಿದೆ. ಈಗ ಈ ಪೇಜ್‌ಗೆ ಎರಡೂವರೆ ಲಕ್ಷ ಫಾಲೋವರ್ಸ್ ಇದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ ಒಂದೂವರೆ ಲಕ್ಷ ಹಾಗೂ ಯೂಟ್ಯೂಬ್‌ನಲ್ಲಿ 25 ಸಾವಿರ ಸಬ್‌ಸ್ಕ್ರೈಬರ್ಸ್ ಇದ್ದಾರೆ. ಫೇಸ್‌ಬುಕ್ ಪೇಜ್ ಮಾಡಿದ ಬಳಿಕ ಆರಂಭದಲ್ಲಿ ಉಡುಪಿಯ ಬೇರೆ ಬೇರೆ ಪ್ರದೇಶಗಳಿಗೆ ಬೆಳಗ್ಗಿನ ವೇಳೆ ತೆರಳಿ ಗ್ರಾಮೀಣ ಜನರ ಬದುಕು, ಕಲೆ, ಸಂಸ್ಕೃತಿ ಬಗ್ಗೆ ಫೋಟೊ ತೆಗೆದು ಬರೆಯುತ್ತಿದ್ದೆ. ಅದಕ್ಕೆ ಜನರಿಂದ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ಮುಂದೆ ಕಲಾವಿದರ ಬದುಕು, ಸಂದರ್ಶನ, ಹಳೆಯ ಕಾಲದ ಮನೆಗಳು, ಗ್ರಾಮೀಣ ಭಾಗದ ಖಾದ್ಯಗಳು, ಯಕ್ಷಗಾನ, ಭೂತಾರಾಧನೆ ಮೊದಲಾದ ವಿಷಯಗಳ ಬಗ್ಗೆ ವಿಡಿಯೊ ಮಾಡಿ, ಮುಖ ತೋರಿಸದೆ ಧ್ವನಿ ನೀಡುತ್ತಿದ್ದೆ. ನಮ್ಮ ಜನರಿಗೆ ಹಳ್ಳಿಯ ಬದುಕು, ಮಾಸಿ ಹೋದ ಗ್ರಾಮೀಣ ನೆನಪುಗಳನ್ನು ಕಳೆದುಕೊಂಡ ಭಾವ ಕಾಡುತ್ತಿತ್ತೋ ಏನೋ, ನಾನು ಈ ವಿಷಯಗಳ ಬಗ್ಗೆ ಮಾಡುತ್ತಿದ್ದ ವಿಡಿಯೊಗಳಿಗೆ ಮಾರುಹೋದರು. ಅದರಿಂದ ನಾನು ಹಾಕುತ್ತಿದ್ದ ವಿಡಿಯೊಗಳ ವೀಕ್ಷಣೆಯು ಲಕ್ಷ ದಾಟುತ್ತಿತ್ತು.

ನಾನು ವಿಡಿಯೊ ಎಡಿಟಿಂಗ್‌ಗೆ ಹೆಚ್ಚಿನ ಮಹತ್ವ ನೀಡುತ್ತಿರಲಿಲ್ಲ. ಆರಂಭದಲ್ಲಿ ₹16 ಸಾವಿರ ಮೌಲ್ಯದ ಫೋನ್‌ನಲ್ಲಿ ವಿಡಿಯೊ ಮಾಡುತ್ತಿದ್ದೆ, ಹೆಚ್ಚೇನೂ ಎಡಿಟ್ ಮಾಡದೆ ಅಪ್‌ಲೋಡ್ ಮಾಡುತ್ತಿದ್ದೆ, ಆದರೂ ಜನರು ಇಷ್ಟಪಡುತ್ತಿದ್ದರು. ಜನರು ನನ್ನನ್ನು ಧ್ವನಿಯಿಂದಲೇ ಗುರುತಿಸಲು ಪ್ರಾರಂಭಿಸಿದರು.

‘ಉಡುಪಿಯಲ್ಲಿ ಜಗತ್ತನ್ನು ಕಾಣಬೇಕು, ಜಗತ್ತಿನಲ್ಲಿ ಉಡುಪಿಯನ್ನು ಕಾಣಬೇಕು’ ಎಂಬುದು ನನ್ನ ಧೋರಣೆ. ನಾನು ಎಲ್ಲೇ ಹೋದರೂ ಉಡುಪಿಯ ಜೊತೆಗೆ ನಂಟು ಇರುವ ವಿಡಿಯೊಗಳನ್ನೇ ಮಾಡುತ್ತೇನೆ. ಉಡುಪಿ ಜಿಲ್ಲೆಯ ಏಳು ತಾಲ್ಲೂಕುಗಳು ನನಗೆ ಏಳು ಖಂಡಗಳು ಇದ್ದಂತೆ. ಅಲ್ಲಿ ಮೊಗೆದಷ್ಟೂ ವಿಷಯಗಳು ಸಿಗುತ್ತಿವೆ. ಉಡುಪಿಯ ಒಂದು ತಾಲ್ಲೂಕು ಪಶ್ಚಿಮ ಘಟ್ಟದ ತಪ್ಪಲಿನಲ್ಲಿದ್ದರೆ, ಇನ್ನೊಂದು ತಾಲ್ಲೂಕು ಕಡಲ ತಡಿಯಲ್ಲಿದೆ. ಮತ್ತೊಂದು ತಾಲ್ಲೂಕು ನಗರ ಪ್ರದೇಶವನ್ನು ಹೊಂದಿಕೊಂಡಿದೆ. ಎರಡು ತಾಲ್ಲೂಕುಗಳಲ್ಲಿ ಭಾಷೆಯೇ ಬೇರೆ ಇದೆ. ಹೀಗೆ ವಿವಿಧತೆಯಲ್ಲಿ ಏಕತೆ ಇದೆ. ಇದುವೇ ನನ್ನ ವಿಡಿಯೊಗಳ ಜೀವಾಳ.

ಕರಾವಳಿಯ ಜನ ಕಂಬಳ, ಭೂತ ಕೋಲ, ದೇವಿ ಮಹಾತ್ಮೆ ಯಕ್ಷಗಾನವನ್ನು ಸಾವಿರ ಸಲ ಬೇಕಾದರೂ ಬೇಜಾರಿಲ್ಲದೆ ನೋಡುತ್ತಾರೆ. ಇದೆಲ್ಲ ನನ್ನ ಸಾಮಾಜಿಕ ಮಾಧ್ಯಮ ಪಯಣಕ್ಕೆ ಸ್ಫೂರ್ತಿಯ ವಿಷಯಗಳು. ಸಾಮಾಜಿಕ ಮಾಧ್ಯಮಕ್ಕೆ ಬರುವುದಕ್ಕೂ ಮೊದಲು ಓದು ಮತ್ತು ಬರವಣಿಗೆ ನನ್ನ ಹವ್ಯಾಸವಾಗಿತ್ತು. ‘ಪಂಡಿತಾ’, ‘ದಾರಿ ತಪ್ಪಿಸು ದೇವರೇ’, ‘ನಾನು ಸನ್ಯಾಸಿಯಾಗಲು ಹೊರಟಿದ್ದೆ’, ‘ಚಂದದ ಹಳ್ಳಿನ ಹುಡುಗಿ 18 ಅವಳುಗಳು’ ಕಥೆಗಳು ಎಂಬ ನಾಲ್ಕು ಪುಸ್ತಕಗಳನ್ನೂ ಬರೆದಿದ್ದೇನೆ. ನಮ್ಮ ಪುಸ್ತಕವನ್ನು ಎಷ್ಟು ಮಂದಿ ಮೆಚ್ಚಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಆದರೆ ಸಾಮಾಜಿಕ ಮಾಧ್ಯಮದಲ್ಲಿ ಒಂದು ವಿಡಿಯೊ ಹಾಕಿದರೆ ತಕ್ಷಣವೇ ಜನರು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾರೆ. ಅದು ಹೆಚ್ಚು ಖುಷಿ ಕೊಡುತ್ತದೆ.

ಕಾರ್ಕಳದ ನಿಟ್ಟೆ ಗ್ರಾಮದ ಬೋರ್ಗಲ್‌ಗುಡ್ಡೆ ನನ್ನೂರು. ಅಲ್ಲೇ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದೆ. ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದೆ. ಪತ್ರಿಕೋದ್ಯಮಕಲಿಕೆಯಿಂದಬರೆಯುವ ಹವ್ಯಾಸ ಬೆಳೆಸಿಕೊಂಡೆ, ಉಪನ್ಯಾಸಕನಾದ ಬಳಿಕ ಸಾಮಾಜಿಕ ಮಾಧ್ಯಮದ ಸೆಳೆತಕ್ಕೊಳಗಾದೆ. ಇಂದು ಸಾಮಾಜಿಕ ಮಾಧ್ಯಮಗಳಿಗೆ ಕಂಟೆಂಟ್ ಕ್ರಿಯೇಟ್ ಮಾಡುವುದರಲ್ಲೇ ಪೂರ್ಣವಾಗಿ ತೊಡಗಿಸಿಕೊಂಡಿದ್ದೇನೆ. ಅದರಿಂದಲೇ ಪ್ರಸಿದ್ಧಿಯನ್ನೂ ಜನರ ಪ್ರೀತಿಯನ್ನೂ ಸಂಪಾದಿಸಿದ್ದೇನೆ.

**ಕೊಂಡಿ: instagram.com / udupiya kandeera?igsh= MWRkc3ZzdG5xNnQw**

■